KARN210011872019

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚನ್ನಪಟ್ಟಣ**

**:ಉಪಸ್ಥಿತರುಃ**

**ಶ್ರೀ.ವೆಂಕಟೇಶಪ್ಪ ವಿ.,** ಬಿ.ಎ. ಎಲ್.ಎಲ್.ಬಿ.
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನಪಟ್ಟಣ**

**ದಿನಾಂಕ 05 ನೇ ಜೂನ್ 2026 ನೇ ಇಸವಿ**

**ಸಿ.ಸಿ.ಸಂಖ್ಯೆಃ 381/2019**

**ಪಿರ್ಯಾದುದಾರರುಃ**

ಸರ್ಕಾರದ ಪರವಾಗಿಃ
ಅಕ್ಕೂರು ಪೊಲೀಸ್ ಠಾಣೆ
ಅಕ್ಕೂರು, ಚನ್ನಪಟ್ಟಣ.

**(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)**

**ವಿರುದ್ಧ**

**ಆರೋಪಿತರು:**

1. ಸೀನ
ಬಿನ್ ಚಿಕ್ಕಹೈದೇಗೌಡ,
ವಯಸ್ಸು 35 ವರ್ಷ.

2. ರಮೇಶ್
ಬಿನ್ ಚಿಕ್ಕಹೈದೇಗೌಡ,
ವಯಸ್ಸು 25 ವರ್ಷ

3. ಸ್ವಾಮಿ ಎಂ. ಟಿ
ಬಿನ್ ತಿಮ್ಮಯ್ಯ,
ವಯಸ್ಸು 21 ವರ್ಷ

4. ಕುಮಾರ,
ಬಿನ್ ದೊಳ್ಳೇಗೌಡ,
ವಯಸ್ಸು 20 ವರ್ಷ

5. ಮನಿಯಾ,
ಬಿನ್ ಕೃಷ್ಣಪ್ಪ,
ವಯಸ್ಸು 20 ವರ್ಷ

6. ಮುತ್ತುರಾಜು,
ಬಿನ್ ಮುತ್ತುರಾಜು,
ವಯಸ್ಸು 21 ವರ್ಷ
ಎಲ್ಲರ ವಾಸ. ಮಾದಾಪುರ ಗ್ರಾಮ,
ವಿರೂಪಾಕ್ಷಿಪುರ ಹೊಬಳಿ,
ಚನ್ನಪಟ್ಟಣ ತಾಲ್ಲೂಕು,
ರಾಮನಗರ ಜಿಲ್ಲೆ.

(ಆರೋಪಿತರ ಪರ ಪ್ರತಿನಿಧಿಸುವವರು ಶ್ರೀ ಡಿ.ಎನ್ ಹೆಚ್.,
ವಕೀಲರು)

| | |
|---|---|
| ತಕ್ಷೀರು ನಡೆದ ದಿನಾಂಕ | 07.09.2019 |
| ತಕ್ಷೀರು ವರದಿ ಮಾಡಿದ ದಿನಾಂಕ | 08.09.2019 |
| ಫಿರ್ಯಾದುದಾರರ ಹೆಸರು | ಶ್ರೀಮತಿ. ಸಣ್ಣಮ್ಮ |
| ಸಾಕ್ಷಿದಾರರ ಹೇಳಿಕೆಯ ದಿನಾಂಕ | 16.05.2026 |
| ಸಾಕ್ಷಿದಾರರ ಹೇಳಿಕೆಯು ಮುಕ್ತಾಯವಾದ ದಿನಾಂಕ | 16.05.2026 |
| ಅಪಾದಿಸಲಾದ ಅಪಾದನೆಗಳು | ಭಾರತೀಯ ದಂಡ ಸಂಹಿತೆ ಕಲಂ.143, 147, 324, 323 ಸಹ ಕಲಂ.149 |
| ನ್ಯಾಯಾಲಯದ ತೀರ್ಮಾನ | ನಿರ್ದೋಷಿತರು |

**(ವೆಂಕಟೇಶಪ್ಪ.ವಿ)**
**ಪ್ರಧಾನ** ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನಪಟ್ಟಣ

**:: ತೀರ್ಪು ::**

ಅಕ್ಕೂರು ಪೊಲೀಸ್ ಠಾಣೆಯ ಠಾಣಾಧಿಕಾರಿಗಳು 1 ರಿಂದ 6 ನೇ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.143, 147, 324, 323 ಸಹ ಕಲಂ.149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆಂದು ಆಪಾದಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2.** ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರ**:**

ದಿನಾಂಕಃ 07.09.2019 ರಂದು ರಾತ್ರಿ 9.30 ಗಂಟೆ ಸಮಯದಲ್ಲಿ ಅಕ್ಕೂರು ಪೋಲೀಸ್ ಠಾಣಾ ವ್ಯಾಪ್ತಿಯ ಮಾದಾಪುರ ಗ್ರಾಮದ ಕೃಷ್ಣ ರವರ ಮನೆಯ ಮುಂಭಾಗದ ಸಾರ್ವಜನಿಕ ರಸ್ತೆಯಲ್ಲಿ ಚಾಸಾ2 ಮತ್ತು 3 ರವರು ಗಣೇಶ ಮೆರವಣಿಗೆಯನ್ನು ನೋಡುತ್ತಾ ನಿಂತಿದ್ದು ಚಾಸಾ-2 ರವರು ಚಾಸಾ3 ರವರಿಗೆ ತಮಾಷೆಗೆ ಬೈಯತ್ತಿದ್ದುದ್ದನ್ನು ನಮಗೆ ಬೈಯುತ್ತಿದ್ದಾನೆಂದು ತಿಳಿದುಕೊಂಡು 1 ರಿಂದ 6 ನೇ ಆರೋಪಿತರು ಗುಂಪು ಕಟ್ಟಿಕೊಂಡು ಬಂದು ಯಾಕೋ ನಮಗೆ ಬೈಯುತ್ತಿದ್ದೀಯಾ ಎಂದು ಯಾವುದೋ ಹಳೆಯ ದ್ವೇಷದಿಂದ ಚಾಸಾ-2 ರವರಿಗೆ 1 ನೇ ಆರೋಪಿ ಕಲ್ಲಿನಿಂದ ತಲೆಗೆ ಹೊಡೆದು 3 ನೇ ಆರೋಪಿ ಚಾಸಾ2 ರವರಿಗೆ ಅದೇ ಕಲ್ಲಿನಿಂದ ಎಡ ಕಣ್ಣಿನ ಮೇಲೆ ಹೊಡೆದು, 2, 4, 5 ಮತ್ತು 6 ನೇ ಆರೋಪಿತರು ಕೈಗಳಿಂದ ಚಾಸಾ-2 ರವರ ಮೈ ಮೇಲೆ ಮತ್ತು ಕತ್ತಿನ ಮೇಲೆ ಹೊಡೆದು ಚಾಸಾ-2 ರವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆಂದು ತನಿಖೆಯಿಂದ ದೃಢಪಟ್ಟಿರುತ್ತದೆ ಎಂಬುದು ಅಭಿಯೋಜನೆಯ ಪ್ರಕರಣದ ಸಾರಾಂಶವಾಗಿರುತ್ತದೆ.

**3.** ಆರೋಪಿತರು ವಕೀಲರ ಮುಖಾಂತರ ಹಾಜರಾಗಿ ನ್ಯಾಯಾಲಯದಿಂದ ಜಾಮೀನನ್ನು ಪಡೆದುಕೊಂಡು, ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರ ಪ್ರಕಾರ ಆರೋಪಿತರ ದೋಷಾರೋಪಣಾ ಪಟ್ಟಿಯ ಪ್ರತಿಯನ್ನು ನ್ಯಾಯಾಲಯವು ಪೂರೈಸಿದ್ದು, ಆರೋಪಿತರ ವಿರುದ್ಧ ಈ ನ್ಯಾಯಾಲಯವು ಮಾಡಲಾದ ದೋಷಾರೋಪಣೆಯು ತಾವು ಯಾವುದೇ ತಪ್ಪನ್ನು ಮಾಡಿಲ್ಲವೆಂದು ಮತ್ತು ಸದರಿ ಮೊಕದ್ದಮೆಯು ವಿಚಾರಣೆಯಾಗಬೇಕೆಂದು ತಿಳಿಸಿದ್ದರಿಂದ ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆಯು ನಡೆಸಲ್ಪಟ್ಟಿರುತ್ತದೆ.

**4.** ಅಭಿಯೋಜನೆಯ ಪರ ಹಾಜರುಪಡಿಸಿದ 09 ಜನ ಸಾಕ್ಷಿದಾರರ ಪೈಕಿ ಸಾಕ್ಷ್ಯ ವಿಚಾರಣೆಯಲ್ಲಿ ಪ್ರಾಸಾ.1 ರಿಂದ ಪ್ರಾಸಾ.3 ರವರು ವಿಚಾರಣೆಗೆ ಒಳಪಟ್ಟಿರುತ್ತಾರೆ. ಅಭಿಯೋಜನೆಯ ಪರ ನಿಶಾನೆ.ಪಿ.1 ರಿಂದ ಪಿ.5 ರಂತೆ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಸದರಿ ಮೊಕದ್ದಮೆಯಲ್ಲಿ ಪ್ರಾಸಾ.1 ರಿಂದ ಪ್ರಾಸಾ.3 ರವರ ಸಾಕ್ಷ್ಯಯು ಪ್ರತಿಕೂಲ ಸಾಕ್ಷ್ಯವೆಂದು ಪರಿಗಣಿಸಲ್ಪಟ್ಟಿರುವುದರಿಂದ ಆರೋಪಿತರ ವಿರುದ್ಧ ಆರೋಪಿಸಲ್ಪಟ್ಟಿರುವ ಅಪಾದನೆಗಳನ್ನು ಸಾಬೀತು ಪಡಿಸುವ ಯಾವುದೇ ಸಾಕ್ಷ್ಯವು ಇಲ್ಲದ ಕಾರಣ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಕೆಳಗಿನ ಪ್ರಕ್ರಿಯೆಗಳನ್ನು ಮನ್ನಾ ಮಾಡಲಾಗಿರುತ್ತದೆ.

**5.** ಆರೋಪಿತರು ತಮ್ಮ ಪರ ಯಾವುದೇ ಸಾಕ್ಷ್ಯ ವಿಚಾರಣೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**6.** ಇಬ್ಬರ ಪರ ವಾದವನ್ನು ಕೇಳಿರುತ್ತೇನೆ. ಹಾಜರುಪಡಿಸಿದ ದಾಖಲಾತಿಗಳನ್ನು ಪರಿಶೀಲಿಸಿರುತ್ತೇನೆ.

**7.** ಈ ಪ್ರಕರಣವನ್ನು ತೀರ್ಮಾನ ಮಾಡಲು ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆ.

**: ಅಂಶಗಳು::**

**1. ದಿನಾಂಕಃ 07.09.2019 ರಂದು ರಾತ್ರಿ 9.30 ಗಂಟೆ ಸಮಯದಲ್ಲಿ ಅಕ್ಕೂರು ಪೋಲೀಸ್ ಠಾಣಾ ವ್ಯಾಪ್ತಿಯ ಮಾದಾಪುರ ಗ್ರಾಮದ ಕೃಷ್ಣ ರವರ ಮನೆಯ ಮುಂಭಾಗದ ಸಾರ್ವಜನಿಕ ರಸ್ತೆಯಲ್ಲಿ ಚಾಸಾ2 ಮತ್ತು ಚಾಸಾ-3 ರವರು ಗಣೇಶ ಮೆರವಣಿಗೆಯನ್ನು ನೋಡುತ್ತಾ ನಿಂತಿರುವಾಗ ಚಾಸಾ2 ರವರು ಚಾಸಾ3 ರವರಿಗೆ ತಮಾಷೆಗೆ ಬೈಯುತ್ತಿದ್ದುದ್ದನ್ನು ನಮಗೆ ಬೈಯುತ್ತಿದ್ದಾನೆಂದು ತಿಳಿದುಕೊಂಡು 1 ರಿಂದ 6 ನೇ ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು ಬಂದಿರುತ್ತಾರೆ. ಆದಕಾರಣ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ.143 ಸಹವಾಚಕ ಕಲಂ.149 ಪ್ರಕಾರ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತದೆಯೇ?**

**2. ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ, ಆರೋಪಿತರು ಏಕೋದ್ದೇಶದಿಂದ, 2, 4, 5 ಮತ್ತು 6 ನೇ ಆರೋಪಿತರು ಕೈಗಳಿಂದ ಚಾಸಾ-2 ರವರ ಮೈ ಮೇಲೆ ಮತ್ತು ಕತ್ತಿನ ಮೇಲೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ. ಆದಕಾರಣ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ.323 ಸಹವಾಚಕ ಕಲಂ.149 ಪ್ರಕಾರ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತದೆಯೇ?**

**3. ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ, ಆರೋಪಿತರು ಏಕೋದ್ದೇಶದಿಂದ, ಚಾಸಾ-2 ರವರಿಗೆ 1 ನೇ ಆರೋಪಿ ಕಲ್ಲಿನಿಂದ ತಲೆಗೆ ಹೊಡೆದು 3 ನೇ ಆರೋಪಿ ಚಾಸಾ-2 ರವರಿಗೆ ಅದೇ ಕಲ್ಲಿನಿಂದ ಎಡ ಕಣ್ಣಿನ ಮೇಲೆ ಹೊಡೆದು**

**ರಕ್ತಗಾಯಪಡಿಸಿರುವುದರಿಂದ ಚಾಸಾ-1 ಮತ್ತು ಚಾಸಾ-2 ರವರಿಗೆ ಸಾಮಾನ್ಯ ಸ್ವರೂಪದ ರಕ್ತಗಾಯವನ್ನುಂಟು ಮಾಡಿರುತ್ತಾರೆ. ಆದಕಾರಣ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ.324 ಸಹವಾಚಕ ಕಲಂ.149 ಪ್ರಕಾರ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತದೆಯೇ?**

**4. ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ, ಆರೋಪಿತರು ಏಕೋದ್ದೇಶದಿಂದ, 1 ರಿಂದ 6 ನೇ ಆರೋಪಿತರೆಲ್ಲರೂ ಚಾಸಾ-1 ರಿಂದ ಚಾಸಾ-3 ರವರಿಗೆ ಗಣೇಶ ಮೆರವಣಿಗೆ ನೋಡುವ ಸಂದರ್ಭದಲ್ಲಿ ದೊಂಬಿ ಮಾಡಿರುತ್ತಾರೆ. ಆದಕಾರಣ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ.147 ಸಹವಾಚಕ ಕಲಂ.149 ಪ್ರಕಾರ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತದೆಯೇ?**

**5. ಮಾಡುವ ಆದೇಶ ಏನು ?**

**8.** ಈ ನ್ಯಾಯಾಲಯವು ವಾದವನ್ನು ಆಲಿಸಿ ದಾಖಲೆಗಳನ್ನು ಪರಿಶೀಲಿಸಿ ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತದೆ.

| | | |
|---|---|---|
| ಅಂಶ ಸಂಖ್ಯೆ **1** | **:** | ನಕರಾತ್ಮಕವಾಗಿ |
| ಅಂಶ ಸಂಖ್ಯೆ **2** | **:** | ನಕರಾತ್ಮಕವಾಗಿ |
| ಅಂಶ ಸಂಖ್ಯೆ **3** | **:** | ನಕರಾತ್ಮಕವಾಗಿ |
| ಅಂಶ ಸಂಖ್ಯೆ **4** | **:** | ನಕರಾತ್ಮಕವಾಗಿ |
| ಅಂಶ ಸಂಖ್ಯೆ **5** | **:** | ಅಂತಿಮ ಆದೇಶದಂತೆ |

ಈ ಕೆಳಕಂಡ ಕಾರಣಗಳಿಗಾಗಿ

<u>ಕಾರಣಗಳು</u>

**9.** <u>ಅಂಶ ಸಂಖ್ಯೆ **1** ರಿಂದ **4:**</u> ಈ ಎಲ್ಲಾ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಇವುಗಳನ್ನು ಒಟ್ಟಿಗೆ ತೆಗೆದುಕೊಳ್ಳಲಾಗಿದೆ.

**10.** ಈ ಪ್ರಕರಣದಲ್ಲಿ ಅಭಿಯೋಜನೆಯವರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.143, 147, 324, 323 ಸಹ ಕಲಂ.149 ರಡಿಯಲ್ಲಿ ಕೆಳಗೆ ಅಪರಾಧವೆಸಗಿರುವ ಕುರಿತು ಆರೋಪ ಹೊರಿಸಿದ್ದು, ತಮ್ಮ ಪ್ರಕರಣವನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ತಮ್ಮ ಪರ ಸಾಕ್ಷ್ಯ ವಿಚಾರಣೆಗಾಗಿ ಮೂರು ಜನ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿರುತ್ತಾರೆ.

**11.** ಚಾಸಾ.**1/**ಪ್ರಾಸಾ.**1** ಸಣ್ಣಮ್ಮ ರವರು ಈ ಪ್ರಕರಣದಲ್ಲಿ ದೂರುದಾರ ಸಾಕ್ಷಿಯಾಗಿದ್ದು, ಆರೋಪಿತರು ಗೊತ್ತು. ಆರೋಪಿತರಿಗೂ ಮತ್ತು ನನಗೂ ಬಾಯಿಮಾತಿನ ಜಗಳ ಆಗಿರುತ್ತದೆ. ಆರೋಪಿತರು ಅಕ್ರಮ ಕೂಟ ರಚಿಸಿ, ನನಗೆ ಅವಾಚ್ಯ ಶಬ್ದದಿಂದ ನಿಂದಿಸಿಲ್ಲ, ನನ್ನ ಮೇಲೆ ಹಲ್ಲೆ ಮಾಡಿಲ್ಲ, ಪೋಲಿಸರು ನನ್ನ ಸಮಕ್ಷಮ ಮಹಜರ್ ಮಾಡಿಲ್ಲ. ಪೋಲಿಸರು ನನ್ನ ಸಮಕ್ಷಮ ಮುದ್ದೆ ಮಾಲುಗಳನ್ನು ಜಪ್ತು ಮಾಡಿಕೊಂಡಿಲ್ಲ. ನಾನು ಪೋಲಿಸರ ಮುಂದೆ ಮುಂದುವರೆದ ಹೇಳಿಕೆಯನ್ನು ನೀಡಿಲ್ಲ ಎಂದು ಪ್ರತಿಕೂಲ ಸಾಕ್ಷ್ಯ ನುಡಿದು, ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿರುವುದಾಗಿ ನುಡಿದಿರುತ್ತಾರೆ. ಚಾಸಾ.**2/**ಪ್ರಾಸಾ.**2** ರಾಜು ಅಲಿಯಾಸ್ ರಾಜೇಶ್ ರವರು ಈ ಪ್ರಕರಣದಲ್ಲಿ ಗಾಯಾಳು ಸಾಕ್ಷಿಯಾಗಿದ್ದು, ಆರೋಪಿತರು ಗೊತ್ತು. ಆರೋಪಿತರಿಗೂ ಮತ್ತು ನನಗೂ ಬಾಯಿಮಾತಿನ ಜಗಳ ಆಗಿರುತ್ತದೆ.

ಆರೋಪಿತರು ಅಕ್ರಮ ಕೂಟ ರಚಿಸಿ, ನನಗೆ ಅವಾಚ್ಯ ಶಬ್ದದಿಂದ ನಿಂದಿಸಿಲ್ಲ, ನನ್ನ ಮೇಲೆ ಹಲ್ಲೆ ಮಾಡಿಲ್ಲ, ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿಲ್ಲ ಎಂದು ಪ್ರತಿಕೂಲ ಸಾಕ್ಷ್ಯ ನುಡಿದು ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿರುವುದಾಗಿ ನುಡಿದಿರುತ್ತಾರೆ. ಚಾಸಾ.3/ಪ್ರಾಸಾ.3 ರಮೇಶ್ ರವರು ಈ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿಯಾಗಿದ್ದು, ಆರೋಪಿತರು ಗೊತ್ತು. ಆರೋಪಿತರಿಗೂ ಮತ್ತು ನನಗೂ ಬಾಯಿಮಾತಿನ ಜಗಳ ಆಗಿರುತ್ತದೆ. ಆರೋಪಿತರು ಅಕ್ರಮ ಕೂಟ ರಚಿಸಿ, ನನಗೆ ಅವಾಚ್ಯ ಶಬ್ದದಿಂದ ನಿಂದಿಸಿಲ್ಲ, ನನ್ನ ಮೇಲೆ ಹಲ್ಲೆ ಮಾಡಿಲ್ಲ, ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿಲ್ಲ ಎಂದು ಪ್ರತಿಕೂಲ ಸಾಕ್ಷ್ಯ ನುಡಿದು ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿರುವುದಾಗಿ ನುಡಿದಿರುತ್ತಾರೆ. ಪ್ರಾಸಾ.1 ರಿಂದ ಪ್ರಾಸಾ.3 ರವರ ಈ ಮೇಲಿನ ಸಾಕ್ಷ್ಯ ಹೇಳಿಕೆಯನ್ನು ಗಮನಿಸಿದಾಗ ಪ್ರಾಸಾ.1 ರಿಂದ ಪ್ರಾಸಾ.3 ರವರ ಸಾಕ್ಷ್ಯವು ದೂರಿನಲ್ಲಿರುವ ಎಲ್ಲಾ ವಿಷಯಗಳಿಗೆ ಸಂಪೂರ್ಣ ವ್ಯತಿರಿಕ್ತವಾಗಿರುವುದು ಕಂಡುಬರುತ್ತದೆ. ಸರ್ಕಾರಿ ಅಭಿಯೋಜಕರು ಈ ಮೂಲಕ ಪ್ರತಿಕೂಲ ಸಾಕ್ಷ್ಯವಾಗಿ ಪರಿಗಣಿಸಲಾದ ಪ್ರಾಸಾ.1 ರಿಂದ ಪ್ರಾಸಾ.3 ರವರನ್ನು ಪಾಟೀ ಸವಾಲಿಗೆ ಗುರಿಪಡಿಸಿದ್ದರೂ ಸಹ ಪ್ರಾಸಾ.1 ರಿಂದ ಪ್ರಾಸಾ.3 ರವರನ್ನು ಆರೋಪಿತರ ವಿರುದ್ಧ ಇರುವ ಎಲ್ಲಾ ಆರೋಪಗಳನ್ನು ಸಾರಾಸಗಟಾಗಿ ನಿರಾಕರಿಸಿರುತ್ತಾರೆ. ಈ ಮೂಲಕ ಅಭಿಯೋಜನೆಯವರು ಪ್ರಾಸಾ.1 ರಿಂದ ಪ್ರಾಸಾ.3 ರವರನ್ನು ಪಾಟೀ ಸವಾಲಿನ ಮುಖಾಂತರವೂ ಯಾವುದೇ ಸಾಕ್ಷ್ಯ ಹೇಳಿಕೆಗಳನ್ನು ತಮ್ಮ ಪರ ಪಡೆಯುವಲ್ಲಿ ವಿಫಲರಾಗಿರುತ್ತಾರೆ. ಪ್ರಾಸಾ.1 ರಿಂದ ಪ್ರಾಸಾ.3 ರವರ ಸಾಕ್ಷ್ಯದ ಮುಖಾಂತರ ಆರೋಪಿತರ ವಿರುದ್ಧ ಇರುವ ಯಾವುದೇ ಆರೋಪಗಳನ್ನು ಸಾಬೀತು ಪಡಿಸುವಲ್ಲಿ

ಅಭಿಯೋಜನೆಯವರು ಸ್ಪಷ್ಟ ವೈಫಲ್ಯ ಹೊಂದಿರುವ ಹಿನ್ನಲೆಯಲ್ಲಿ ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡುವ ಪ್ರಕ್ರಿಯೆಗಳನ್ನು ಕೈ ಬಿಡಲಾಗಿರುತ್ತದೆ. ಆದ್ದರಿಂದ ಅಭಿಯೋಜನೆಯವರು ಆರೋಪಿತರ ಮೇಲೆ ಆಪಾದಿಸಿದಂತೆ ಆರೋಪಗಳನ್ನು ನಿಸ್ಸಂಶಯವಾಗಿ ಸಾಬೀತು ಪಡಿಸುವಲ್ಲಿ ವಿಫಲರಾಗಿರುತ್ತಾರೆ. ಈ ಮೂಲಕ ಸಂಶಯದ ಲಾಭವನ್ನು ಪಡೆಯಲು ಆರೋಪಿತರು ಅರ್ಹರಾಗಿದ್ದಾರೆಂದು ನ್ಯಾಯಾಲಯವು ಪರಿಗಣಿಸುತ್ತಾ **1** ರಿಂದ **4** ನೇ ಅಂಶಗಳಿಗೆ ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

**12.** <u>ಅಂಶ ಸಂಖ್ಯೆ **5:**</u> ಈ ಮೇಲ್ಕಂಡ 1 ರಿಂದ 4 ನೇ ಅಂಶದಲ್ಲಿ ಚರ್ಚಿಸಿದಂತೆ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

## **:: ಆದೇಶ::**

ಆರೋಪಿ ಸಂ**: 1** ರಿಂದ **6** ನೇ ರವರ ವಿರುದ್ಧ ಹೊರಿಸಲಾದ ಭಾರತೀಯ ದಂಡ ಸಂಹಿತೆ ಕಲಂ**. 143, 147, 324, 323** ಸಹ ಕಲಂ**.149** ರಡಿಯಲ್ಲಿನ ದೋಷಾರೋಪಣೆಗಳಿಂದ ನಿರ್ದೋಷಿಗಳು ಎಂದು ತೀರ್ಮಾನಿಸಿ, ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ**.248(1)** ರಡಿಯಲ್ಲಿ ಬಿಡುಗಡೆ ಮಾಡಲಾಗಿದೆ.

ಆರೋಪಿತರ ಮತ್ತು ಜಾಮೀನುದಾರರು ಈಗಾಗಲೇ ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಲಾಗಿದೆ.

ಮಾಲು ಪಟ್ಟಿ ಸಂ**.91/2019** ಮತ್ತು ಪಿ.ಆರ್.ಸಂ. **147/2022** ರಲ್ಲಿನ ಒಂದು ಹಿಡಿ ಗಾತ್ರದ ಕಲ್ಲು ಮೌಲ್ಯರಹಿತವಾಗಿರುವುದರಿಂದ, ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, **2026** ನೇ ಇಸವಿ ಜೂನ್ **05** ನೇ ದಿನಾಂಕದಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಲಾಯಿತು.)

VENKATESHAPPA V
Digitally signed by VENKATESHAPPA V
Date: 2026.06.06 16:59:04 +0530

**(ವೆಂಕಟೇಶಪ್ಪ.ವಿ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನಪಟ್ಟಣ

**:: ಅನುಬಂಧ ::**

ಅಭಿಯೋಜನೆಯ ಪರವಾಗಿ ವಿಚಾರಣೆಗೊಳ್ಳಪಟ್ಟ ಸಾಕ್ಷಿದಾರರ ಪಟ್ಟಿ:

| | | |
|---|---|---|
| ಪ್ರಾಸಾ.1 | : | ಶ್ರೀಮತಿ. ಸಣ್ಣಮ್ಮ |
| ಪ್ರಾಸಾ.2 | : | ಶ್ರೀ. ರಾಜು ಅಲಿಯಾಸ್ ರಾಜೇಶ್ |
| ಪ್ರಾಸಾ.3 | : | ಶ್ರೀ. ರಮೇಶ್ |

ಅಭಿಯೋಜನೆಯ ಪರವಾಗಿ ಗುರುತಿಸಲ್ಪಟ್ಟಿರುವ ದಾಖಲೆಗಳ ಪಟ್ಟಿ:

| | | |
|---|---|---|
| ನಿಶಾನೆ ಪಿ 1 | : | ದೂರು |
| ನಿಶಾನೆ ಪಿ 2 | : | ಮಹಜರ್ |
| ನಿಶಾನೆ ಪಿ 3 | : | ಪ್ರಾಸಾ.1 ರವರ ಹೇಳಿಕೆ |
| ನಿಶಾನೆ ಪಿ 4 | : | ಪ್ರಾಸಾ.2 ರವರ ಹೇಳಿಕೆ |
| ನಿಶಾನೆ ಪಿ 5 | : | ಪ್ರಾಸಾ.3 ರವರ ಹೇಳಿಕೆ |

ಆರೋಪಿಗಳ ಪರವಾಗಿ ವಿಚಾರಣೆಗೊಳ್ಳಪಟ್ಟ ಸಾಕ್ಷಿದಾರರ ಪಟ್ಟಿ:

-ಇಲ್ಲ-

ಆರೋಪಿಗಳ ಪರವಾಗಿ ಗುರುತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ:

-ಇಲ್ಲ-

ಅಭಿಯೋಜನೆಯ ಪರವಾಗಿ ಗುರುತಿಸಲ್ಪಟ್ಟಿರುವ ಮುದ್ದೆಮಾಲುಗಳು:

-ಇಲ್ಲ-

**(ವೆಂಕಟೇಶಪ್ಪ.ವಿ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನಪಟ್ಟಣ